ಕರ್ನಾಟಕ ಸರ್ಕಾರ

**ಸಂಖ್ಯೆ:ಇಡಿ 22 ಡಿಪಿಐ 2019**(ಭಾಗ–2)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:24/05/2019.

## ಅಧಿಸೂಚನೆ

**ವಿಷಯ:–** ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್–'ಎ' ಹಿರಿಯ ಶ್ರೇಣಿಯ ವಿಭಾಗೀಯ ಉಪ ನಿರ್ದೇಶಕರು(ದೈಹಿಕ ಶಿಕ್ಷಣ) ವೃಂದದ ಅಧಿಕಾರಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

*–*–*

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ:2368/2011 ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣ ಹಾಗೂ ರಿವ್ಯೂ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಎಂಎ ಸಂಖ್ಯೆ:1151/2018ರಲ್ಲಿ ದಿನಾಂಕ:10/05/2019ರಂದು ನೀಡಿರುವ ತೀರ್ಪು ಮತ್ತು ಸರ್ಕಾರದ ಆದೇಶ ಸಂಖ್ಯೆ:ಸಿ.ಆ.ಸು.ಇ 186 ಎಸ್.ಆರ್.ಎಸ್ 2018, ದಿನಾಂಕ:27/02/2019 ಮತ್ತು ಸರ್ಕಾರದ ಆದೇಶ ಸಂಖ್ಯೆ:ಸಿ.ಆ.ಸು.ಇ 186 ಎಸ್.ಆರ್.ಎಸ್ 2018, ದಿನಾಂಕ:15/05/2019ರಂದು ನೀಡಿರುವ ಮಾರ್ಗಸೂಚಿಗಳನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್–'ಎ' ಹಿರಿಯ ಶ್ರೇಣಿಯ ವಿಭಾಗೀಯ ಉಪ ನಿರ್ದೇಶಕರು (ದೈಹಿಕ ಶಿಕ್ಷಣ) ವೃಂದದ ಅಧಿಕಾರಿಗಳ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ನು ದಿನಾಂಕ:23/05/2019ರಲ್ಲಿದ್ದಂತೆ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಪ್ರಕಟಿಸಲಾಗಿದೆ.

ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ, ಬಾಧಿತರಾಗಬಹುದಾದಂತಹ, ಅಧಿಕಾರಿಗಳು ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ತಮ್ಮ ಆಕ್ಷೇಪಣೆ / ಸಲಹೆ / ಸೂಚನೆಗಳಿದ್ದಲ್ಲಿ, ಅದನ್ನು ಸಮರ್ಥಿಸುವಂತಹ ದಾಖಲೆಗಳೊಂದಿಗೆ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಸಲ್ಲಿಸಿ, ಅದರ ಪ್ರತಿಯನ್ನು ಸರ್ಕಾರದ ಕಾರ್ಯದರ್ಶಿ, ಶಿಕ್ಷಣ ಇಲಾಖೆ(ಪ್ರಾಥಮಿಕ ಮತ್ತು ಪ್ರೌಢ), ಕರ್ನಾಟಕ ಸರ್ಕಾರದ ಸಚಿವಾಲಯ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಸಲ್ಲಿಸುವುದು. ಈ ನಿಗಧಿತ ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳು / ಸಲಹೆಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ಡಿ. ನಾಗೇಂದ್ರ),
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಆಡಳಿತ)

(ಟಿ.ಡಿ. ನಾಗೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಕರ್ನಾಟಕ ಸರ್ಕಾರದ ಸಚಿವಾಲಯ
ಬೆಂಗಳೂರು – 560 001

**ಇವರಿಗೆ:–**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, ಅದರ 10 ಪ್ರತಿಗಳನ್ನು ಶಿಕ್ಷಣ ಇಲಾಖೆಗೆ ಒದಗಿಸುವಂತೆ ಕೋರಿದೆ.

ಸರ್ಕಾರದ ಆದೇಶ ಸಂಖ್ಯೆ:ಇಡಿ 22 ಡಿಪಿಐ 2018(ಭಾಗ-2), ದಿನಾಂಕ:24/05/2019ಕ್ಕೆ

## ಅನುಬಂಧ

## ಸಾರ್ವಜನಿಕ ಶಿಕ್ಷಣ ಇಲಾಖೆ ಗ್ರೂಪ್- ಎ ದರ್ಜೆಯ ಹಿರಿಯ ಶ್ರೇಣಿಯ ವಿಭಾಗೀಯ ಉಪನಿರ್ದೇಶಕರು(ದೈಹಿಕ ಶಿಕ್ಷಣ) ವೃಂದದ ಅಧಿಕಾರಿಗಳ ದಿನಾಂಕ:23/05/2019ರಲ್ಲಿದ್ದಂತೆ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿ

| ಕ್ರ.ಸಂ | ಹಿಂದಿನ ಹುದ್ದೆಯ ಜ್ಯೇ.ಸಂ | ಅಧಿಕಾರಿಯ ಹೆಸರು ಮತ್ತು ವಿಳಾಸ ಶ್ರೀ/ಶ್ರೀಮತಿ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | (ಗ್ರೂಪ್-ಎ ಹಿರಿಯ ಶ್ರೇಣಿ ವಿಭಾಗೀಯ ಉಪನಿರ್ದೇಶಕರು(ದೈಹಿಕ ಶಿಕ್ಷಣ) ವೃಂದದ ಪ್ರಸ್ತುತ ಹುದ್ದೆಗೆ ಬಡ್ತಿ ಹೊಂದಿದ ದಿನಾಂಕ | ವರ್ಗ/ ಎಸ್‌ಸಿ/ ಎಸ್‌ಟಿ ಸಾಮಾನ್ಯ | ಷರಾ |
|---|---|---|---|---|---|---|---|
| 1 | 32 | ಎಂ ಎನ್ ನರಸಪ್ಪ | 01-07-1958 | 19-06-1989 | 01-06-2018 | ಎಸ್.ಸಿ (ಪ.ಜಾತಿ) | ನಿವೃತ್ತಿ |
| 2 | 33 | ಬಿ ಎಸ್ ಅನಂತನಾಯ್ಕ್ | 22-05-1961 | 21-12-1989 | 01-06-2018 | ಎಸ್.ಸಿ (ಪ.ಜಾತಿ) | |
| 3 | 34 | ಟಿ ಹೆಚ್ ಮೇಲಿನಕೇರಿ | 22-07-1959 | 28-12-1989 | 01-06-2018 | ಎಸ್.ಸಿ (ಪ.ಜಾತಿ) | |

**ಸಂಖ್ಯೆ :ಇಡಿ 22 ಡಿಪಿಐ 2019(ಭಾಗ-2)**
**ದಿನಾಂಕ:24/05/2019**

(ಟಿ.ಡಿ. ನಾಗೇಂದ್ರ),
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಆಡಳಿತ)

(ಟಿ.ಡಿ. ನಾಗೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಕರ್ನಾಟಕ ಸರ್ಕಾರದ ಸಚಿವಾಲಯ
ಬೆಂಗಳೂರು - 560 001